## ಎಲ್ಲೆಸ್ಸೆಸ್ ನೆನಪು

ಜ.9ರ ಸಂಚಿಕೆಯಲ್ಲಿ 'ಕನ್ನಡ ದೀವಟಿಗೆ ಎಲ್.ಎಸ್. ಶೇಷಗಿರಿ ರಾವ್' ಕುರಿತು ರಾ. ನಂ. ಚಂದ್ರಶೇಖರ್ ಬರೆದ ಲೇಖನ ಆಪ್ತವಾಗಿತ್ತು. 1974ರ ಮತ್ತು 1984ರ ಫೋಟೊ ನೋಡಿದಾಗ 40 ವರ್ಷ ಹಿಂದಕ್ಕೆ ಹೋದಂತೆ ಆಯಿತು. 'ನಿಮ್ಮೊಡನೆ' ಅಂಕಣದಲ್ಲಿ ಪ್ರವೀಣ್ ಕುಲಕರ್ಣಿ ಬರೆದ ಲೇಖನವೂ ಸತ್ಯದರ್ಶಿಯಾಗಿದೆ. ಎಲ್ಲಿ ನೋಡಿದಲ್ಲಿ ರಸ್ತೆ ಗುಂಡಿಗಳು ಇರುವುದನ್ನು ನೋಡುತ್ತಿದ್ದೇವೆ. ಭ್ರಷ್ಟಾಚಾರ ಯಾವಾಗ ಕಡಿಮೆಯಾಗುತ್ತಿದೆಯೋ ಆಗ ಮಾತ್ರ ಪರಿಸ್ಥಿತಿ ಸುಧಾರಣೆಯಾಗುತ್ತದೆ.

—ಬಿ. ಎಸ್. ಮುಳ್ಳೂರ, ಹಲಗತ್ತಿ
ಎಸ್. ಚನ್ನಪ್ಪ, ಮೈಸೂರು

## ಕಂಗ್ರಾಟ್ಸ್ ಸಪ್ತಶ್ರೀ



ಜ. 9ರ ಸಂಚಿಕೆಯಲ್ಲಿ 'ಇಷ್ಟ ಪಟ್ಟು ಓದಿದರೆ ಯಾವುದೂ ಕಷ್ಟವಲ್ಲ' ಎಂಬ ಶೀರ್ಷಿಕೆಯಲ್ಲಿ ಶಶಿಕುಮಾರ್ ಸಿ. ಅವರು ಮಾಡಿದ ಕೆಎಎಸ್ ಟಾಪರ್ ಆದ ಸಪ್ತಶ್ರೀ ಸಂದರ್ಶನ ಸ್ಫೂರ್ತಿಯ ಸೆಲೆಯಾಗಿದೆ. ಚೆನ್ನಾಗಿ ಓದಲೇಬೇಕು ಎಂದು ಒಂದು ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡ ಯಾವುದೇ ವಿದ್ಯಾರ್ಥಿ ಗುರಿ ಸಾಧಿಸಬಹುದು. ಪೋಷಕರು ತಮ್ಮ ನಿರೀಕ್ಷೆಯ ಭಾರವನ್ನು ಹೇರದೆ ವಿದ್ಯಾರ್ಥಿಗಳಿಗೆ ಪೂರಕ ಮಾಹಿತಿ ಒದಗಿಸಿಕೊಡಬೇಕು. ಈ ನಿಟ್ಟಿನಲ್ಲಿ ಸಪ್ತಶ್ರೀ ಅವರ ಸಾಧನೆ ನಿಜಕ್ಕೂ ಕನ್ನಡಿಗರು ಅಭಿನಂದಿಸಲೇಬೇಕಾದ ವಿಷಯ. ಅವರ ಐಎಎಸ್ ಕನಸು ನನಸಾಗಲಿ.

—ಕಾಳಿಹುಂಡಿ ಶಿವಕುಮಾರ್, ಮೈಸೂರು



## ಚಂದದ ಕ್ಯಾಲೆಂಡರ್

ಜ. 2ರ ಸುಧಾದಲ್ಲಿ ಕಾರ್ಕಳದ ವರಂಗ ಕೆರೆಬಸದಿಯ ವಿಹಂಗಮ ಛಾಯಾಚಿತ್ರದೊಂದಿಗೆ ಮೂಡಿಬಂದ 2020ನೇ ಇಸವಿಯ ಕ್ಯಾಲೆಂಡರ್ ಮನಸೂರೆಗೊಂಡಿತು. ಮುಂಬೈ ಕಚೇರಿಯ ನನ್ನ ಕ್ಯಾಬಿನ್‌ನಲ್ಲಿ ಈ ತಾರೀಕುಪಟ್ಟಿಯನ್ನು ತಕ್ಷಣವೇ ತೂಗು ಹಾಕಿದೆ. ಹೊರನಾಡಿನಲ್ಲಿ ಮರಾಠಿ, ಹಿಂದಿ ಭಾಷೆಗಳ ನಡುವೆ ನಮ್ಮ ಕನ್ನಡದ ಆಪ್ತತೆ ಮುದನೀಡುತ್ತದೆ!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಬಿಂಜ್ ವಾಚರ್ಸ್



ಜ. 9ರ ಸಂಚಿಕೆಯಲ್ಲಿ ಪ್ರಕಟವಾದ ವಿಶಾಖ ಎನ್. ಅವರ ಮುಖಪುಟ ಲೇಖನ 'ಬಿಂಜ್ ವಾಚರ್ಸ್; ಧಾರಾವಾಹಿ ನೋಡಿ ಮರುಳಾದವರು' ಮಾರ್ಮಿಕವಾಗಿದೆ. ಎರಡು ಮೂರು ದಶಕಗಳ ಹಿಂದೆ ವಾರಕ್ಕೊಮ್ಮೆ ಪ್ರಸಾರವಾಗುವ ಧಾರಾವಾಹಿಯ ಮುಂದಿನ ಕಂತನ್ನು ವೀಕ್ಷಿಸಲು ಮುಂದಿನ ವಾರದವರೆಗೆ ಕಾಯುವ ಸಂದರ್ಭವಿತ್ತು. ಆದರೆ ಇಂದು ಕಾಲ ಬದಲಾಗಿದ್ದು ಮೆಗಾ ಧಾರಾವಾಹಿಗಳು ಬಂದು ಜನರಲ್ಲಿನ ಕುತೂಹಲವನ್ನು ಕೆಣಕುತ್ತಿವೆ. ಅನಂತರ ಸ್ಮಾರ್ಟ್ ಫೋನ್ ಯುಗ ಆರಂಭವಾದ ಮೇಲಂತೂ ಧಾರಾವಾಹಿಗಳಿಗಾಗಿ ಕಾಯುವ ಅವಶ್ಯಕತೆಯೇ ಇಲ್ಲದಂತಾಗಿ ಒಂದು ವಾರದ ಇಡೀ ಕತೆಯನ್ನು ಒಂದೇ ಬಾರಿಗೆ ನೋಡುವ ಸೌಲಭ್ಯ ಒದಗಿ ಬಂದಿದೆ. ವೂಟ್, ಜಿಯೋ ಟೀವಿ, ಝೀ 5, ಅಮೆಜಾನ್ ಪ್ರೈಮ್ ಆ್ಯಪ್ ಮುಂತಾದವುಗಳು ನೋಡುಗರಲ್ಲಿ ವ್ಯಸನವನ್ನುಂಟು ಮಾಡುತ್ತಿವೆ. ಇದರಿಂದ ನೋಡುಗರು ಮಾನಸಿಕ ದೃಢತೆ ಕಳೆದುಕೊಳ್ಳುವ ಅಪಾಯವಿದೆ.

—ಎಚ್. ಆರ್. ವಸ್ತ್ರದ, ಧಾರವಾಡ

ಬಿಂಜ್ ವಾಚರ್ಸ್‌ನಿಂದಾಗಿ ಕೆಲವರಿಗಂತೂ ಲಾಭವಾಗಿದೆ. ಹೊಸ ನಟನಟಿಯರು, ಟೆಕ್ನೀಷಿಯನ್ಸ್, ಇಷ್ಟೇ ಏಕೆ? ಬಿಂಜ್ ಈಟರ್ಸ್‌ಗಾಗಿ ಕುಳಿತಲ್ಲೇ ಊಟ ತಿಂಡಿ ಸಪ್ಲೈ ಮಾಡುವ ಆ್ಯಪ್‌ಗಳಿವೆಯಲ್ಲ! ಮನೋರೋಗ ತಜ್ಞರಿಗೆ, ಆಪ್ತ ಸಮಾಲೋಚಕರಿಗೆ ಡಿಮ್ಯಾಂಡ್ ಹೆಚ್ಚುವುದಂತೂ ಸತ್ಯ! ಆದರೆ ಅವರುಗಳಿಗೂ ಸವಾಲೆನಿಸಬಹುದಾದ ಸಮಸ್ಯೆ ಇದು ಎಂದೆನಿಸುತ್ತಿದೆ. ತಪ್ಪು ಯಾರದು? ಬದಲಾವಣೆ ಎಲ್ಲಿಂದ ಬರಬೇಕಿದೆ?

—ವೀಣಾ ಜೋಶಿ, ಬಾರ್ಕೂರು
ಮಧುರಾ ಸುಬ್ರಹ್ಮಣ್ಯ, ಬೆಂಗಳೂರು

## ಬಹುರೂಪಿ ಗೃಹಿಣಿ

ಜ. 9ರ ಸಂಚಿಕೆಯಲ್ಲಿ ಪ್ರಕಟವಾದ 'ಬಹುರೂಪಿ ಗೃಹಿಣಿ!' ಗೃಹಿಣಿಯರಲ್ಲಿ ಆತ್ಮವಿಶ್ವಾಸ ಮೂಡಿಸುವ ಲೇಖನ. ಬಟ್ಟೆ, ಪಾತ್ರೆ, ಮನೆಯ ಸ್ವಚ್ಛತೆ, ಅಡುಗೆ, ಮಕ್ಕಳ ಹಿರಿಯರ ಆರೈಕೆ... ಹೀಗೆ ಪ್ರತಿ ಕೆಲಸಕ್ಕೂ ಮನೆಗೆಲಸದವರು ತೆಗೆದುಕೊಳ್ಳುವ ಸಂಬಳ ಲೆಕ್ಕ ಹಾಕಿದರೆ ಗೃಹಿಣಿಯ ಸಂಬಳವೆಷ್ಟು? ಜೊತೆಗೆ ಓವರ್‌ಟೈಮ್‌ಗೆ ಇಮ್ಮಡಿ ಪಗಾರ. ಮನೆ ಮಂದಿ, ಅತಿಥಿಗಳ ಯೋಗಕ್ಷೇಮವನ್ನು ನಗುನಗುತ್ತಾ ನಿರ್ವಹಿಸುತ್ತಿರುವುದಕ್ಕೆ ಸಂಬಳವೆಷ್ಟು? ಹೋಮ್ ಮೇಕರ್ ಆಗಿದ್ದಕ್ಕೆ ಹೆಮ್ಮೆಪಡಿ.

—ವಿನುತ ಮುರಳೀಧರ, ಶಿವಮೊಗ್ಗ

## ಗಾನಕಲಾ ಪರಿಷತ್ ಸಂಭ್ರಮ

'ಗಾನಕಲಾ ಪರಿಷತ್ತು' ಸುವರ್ಣ ಮಹೋತ್ಸವ ನಡೆಸುತ್ತಿರುವುದರ ಲೇಖನ ಓದಿದೆ. ಎಷ್ಟೊಂದು ಸಂಘ ಸಂಸ್ಥೆಗಳಿಗೂ ಸಹಾಯ ಸಹಕಾರ ಒದಗಿಸುತ್ತಾ ಹಲವಾರು ವರ್ಷಗಳಿಂದ ಸಂಗೀತ ಸೇವೆ ನಡೆಸುತ್ತಿದೆಯಲ್ಲಾ ಈ ಸಂಸ್ಥೆ ಎಂದು ಸಂತೋಷವಾಯ್ತು.

—ಸೀತಾ ಕೇಶವ, ಸಿಡ್ನಿ

## ಹಳೆಯ ಸಂಚಿಕೆಯ ನೆನಪುಗಳು

ನಾನು 'ಸುಧಾ'ವನ್ನು ಬಹುಶಃ ಆರಂಭದ ಸಂಚಿಕೆಯಿಂದ ಓದುತ್ತಿದ್ದೇನೆ. ಅಂದಿನಿಂದ ಇಂದಿನವರೆಗೂ ಈ ವಾರಪತ್ರಿಕೆಯ ಗುಣಮಟ್ಟ ಒಂದೇ ರೀತಿಯಲ್ಲಿದೆ. ನನ್ನ ಕೆಲವು ಲೇಖನಗಳೂ ಕೂಡ ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅಂದಿನ ದಿನಗಳಲ್ಲಿ ಅಕಬರ ಅಲಿಯವರ ಚುಟುಕಗಳು ಬಹಳ ವರ್ಷಗಳ ಕಾಲ ಪ್ರಕಟವಾಗುತ್ತಿದ್ದವು. ಅದೇ ರೀತಿಯಲ್ಲಿ ಪ್ರತಿವಾರ ಒಬ್ಬೊಬ್ಬ ಕ್ರೀಡಾಪಟುಗಳ ಪರಿಚಯ. ಕ್ರಿಕೆಟ್, ಹಾಕಿ, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್ ಇತ್ಯಾದಿ. ಇವೆರಡೂ ನಿಮ್ಮ ಪತ್ರಿಕೆಗಳಲ್ಲಿ ಮರುಮುದ್ರಣ ಕಂಡರೆ ಬಹಳ ಚೆಂದ ಎನಿಸುತ್ತದೆ. ಅದರಲ್ಲೂ ಕ್ರೀಡಾಪಟುಗಳ ಪರಿಚಯ. ಇಂದಿನ ಯುವ ಜನತೆಗೆ ಇವರಲ್ಲಿ ಅನೇಕರ ಪರಿಚಯ ಮಾಡಿದಂತಾಗುತ್ತದೆ.

—ಕೆ. ಎಸ್. ಸೋಮೇಶ್ವರ, ಬೆಂಗಳೂರು

## ದೇವಕಣದ ಪಿತಾಮಹನ ಸ್ಮರಣೆ

ಜ. 2ರ ಸಂಚಿಕೆಯಲ್ಲಿ ಗುರುರಾಜ್ ದಾವಣಗೆರೆ ಅವರು ಬರೆದ 'ದೇವಕಣದ ಪಿತಾಮಹ' ಲೇಖನ, ಅಪ್ರತಿಮ ವಿಜ್ಞಾನಿಯ ಸಮಯೋಚಿತ ಸ್ಮರಣೆಯಾಗಿದೆ. ಅವರು ಗಂಭೀರ ಸಂಶೋಧಕರಾಗಿದ್ದರೂ ಸಂಗೀತ, ಸಾಹಿತ್ಯವನ್ನು ಹೃದಯದಿಂದ ಪ್ರೀತಿಸಿದ ರಸಿಕರಾಗಿದ್ದರು. ಈ ಹೆಮ್ಮೆಯ ಭಾರತೀಯನಿಗೆ ಕೋಟಿ ನಮನ.

—ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in